O.S.No.:122/2016
P.W.:1

ಮದ್ಯಂತರ ಅರ್ಜಿಯ ಆದೇಶದ ಮೇರೆಗೆ ಈ ದಿನ ದಿಃ21.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಜೆ ವಕೀಲರಿಂದಃ**

ಭೋಗ್ಯ ಬಿಡುಗಡೆ ಪತ್ರದ ಇ-ಪ್ರತಿಯನ್ನು ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸಿಸಿ ವಕೀಲರಿಂದಃ-**

ಪ್ರತಿವಾದಿಯರು ದಾವಾಸ್ವತ್ತಿಗೆ ತೊಂದರೆ ನೀಡಿದ್ದರಿಂದ ಈ ದಾವೆ ಸಲ್ಲಿಸಿರುತ್ತೇನೆ. ನನ್ನ ತಂದೆಗೆ ಆರು ಜನ ಮಕ್ಕಳಿರುತ್ತಾರೆ, ಅವರುಗಳೆಂದರೆ ಮಹದೇವಯ್ಯ, ಶಿವಣ್ಣ, ಮಹದೇವಯ್ಯ, ದೇವಮ್ಮ, ದ್ಯಾವಯ್ಯ, ಶಿವರಾಜು ಎಂದು ಇರುತ್ತಾರೆ. ನನ್ನ ತಂದೆಯ 6 ಜನ ಮಕ್ಕಳು ಸೇರಿ ಈ ದಾವೆಯನ್ನು ಸಲ್ಲಿಸಿರುವುದಿಲ್ಲ. ದಾವಾಸ್ವತ್ತು ನನಗೆ ಮತ್ತು 1 ನೇ ವಾದಿಗೆ ಮಾತ್ರ ಸೇರಿರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಈವರೆಗೂ ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ತಂದೆಗೆ 6 ಜನ ಮಕ್ಕಳಲ್ಲಿ ದ್ಯಾವಯ್ಯ ಮತ್ತು ಮಹದೇವಯ್ಯ ಇಬ್ಬರೂ ತೀರಿಕೊಂಡಿದ್ದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ, ದೇವಮ್ಮ ಇವರು ಮದುವೆಯಾಗಿ ಹೋಗಿದ್ದರಿಂದ ಅವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಹಾಗೂ ಮಹದೇವಯ್ಯ ಇವರನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದ್ಯಾವಯ್ಯ ಮತ್ತು ಮಹದೇವಯ್ಯ ಇವರ ಹೆಂಡತಿ ಮಕ್ಕಳು ಇರುತ್ತಾರೆ. ನನ್ನ ತಂದೆಯ ಮೊದಲನೇ ಹೆಂಡತಿ ಮಗ ಮಹದೇವಯ್ಯ ಜೀವಿತ ಇರುತ್ತಾನೆ.

ದಾವಾಸ್ವತ್ತಿನಲ್ಲಿ ನನ್ನ ತಂದೆಯ 6 ಮಕ್ಕಳಿಗೂ ಹಕ್ಕು ಇರುತ್ತದೆ. ದಾವೆ

ಚಾಲ್ತಿಯಲ್ಲಿರುವಾಗ ದಾವಾಸ್ವತ್ತನ್ನು ದಿ.19.8.2022 ರಂದು ಹೆಚ್.ಸಿ ಶೇಖರ್ ಇವರಿಗೆ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತೇವೆಂದರೆ ಸಾಕ್ಷಿಯು ಅವಶ್ಯಕತೆ ಇದ್ದುದ್ದರಿಂದ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಸದರಿ ಕ್ರಯದ ಕರಾರನ್ನು ನನ್ನ ತಂದೆಯ ಮೊದಲನೇ ಹೆಂಡತಿಯ ಮಗ ಮಹದೇವಯ್ಯ, ನನ್ನ ತಂದೆಯ 2 ನೇ ಹೆಂಡತಿಯ ಮಗ ಪೌತಿ ಮಹದೇವಯ್ಯ ನ ಹೆಂಡತಿ ಹೊನ್ನಮ್ಮ, ಶಿವರಾಜು (ನಾನು) ಬರೆದುಕೊಟ್ಟಿರುತ್ತೇವೆ. 1 ನೇ ವಾದಿಗೆ ಸದರಿ ಕರಾರಿನ ವಿಚಾರ ಗೊತ್ತಿರುತ್ತದೆ. ಸದರಿ ಕರಾರಿನ ಸಂದರ್ಭದಲ್ಲಿ 1 ನೇ ವಾದಿ ಹಾಜರಿದ್ದರು. ಸದರಿ ಕರಾರು ಪತ್ರಕ್ಕೆ 1 ನೇ ವಾದಿ ಸಹಿ ಹಾಕಿಲ್ಲ. ಸದರಿ ಹೊನ್ನಮ್ಮ ಈ ದಾವೆಯಲ್ಲಿ ಪಕ್ಷಕಾರರಾಗಿರುವುದಿಲ್ಲ ಎಂದರೆ ಸರಿ. ಸದರಿ ಹೊನ್ನಮ್ಮ ಇವರಿಗೆ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವ ವಿಚಾರ ಗೊತ್ತಿರುತ್ತದೆ. ನನ್ನ ತಂದೆಯ ಮೊದಲನೇ ಹೆಂಡತಿಯ ಮಗ ಮಹದೇವಯ್ಯ ಇವರಿಗೆ ಸಹ ದಾವೆ ನಡೆಯುತ್ತಿರುವ ವಿಚಾರ ಗೊತ್ತಿರುತ್ತದೆ.

ನ್ಯಾಯಾಲಯದಿಂದ ಕ್ರಯ ಮಾಡಲು ನಾನು ಅನುಮತಿ ಪಡೆದಿಲ್ಲ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿ ಈ ದಾವಾಸ್ವತ್ತಿನ ಕುರಿತಾಗಿ ದಾವೆ ಸಲ್ಲಿಸಿ ತಾತ್ಕಾಲಿಕ ನಿರ್ಬಂದಕಾಜ್ಞೆ ಪಡೆದಿರುತ್ತಾರೆ ಎಂದರೆ ಸರಿ. ದಾವಾಸ್ವತ್ತಿನ ಸರ್ಕಾರಿ ಮೌಲ್ಯ 2 ಎಕರೆಗೆ ಈಗ 25 ಲಕ್ಷ ಇರುತ್ತದೆ ಎಂದರೆ ಸರಿ. ನಾನು ದಾವೆ ಸಲ್ಲಿಸುವ ಸಂದರ್ಭದಲ್ಲಿ ದಾವಾಸ್ವತ್ತಿನ ಸರ್ಕಾರಿ ಮೌಲ್ಯ 20 ಲಕ್ಷಕ್ಕಿಂತ ಹೆಚ್ಚು ಇತ್ತು ಎಂದರೆ ಸರಿ.

ನನ್ನ ತಂದೆಗೆ ಇಬ್ಬರೂ ಸಹೋದರರು ಇರುತ್ತಾರೆ ಎಂದರೆ ಸರಿ. ಅವರುಗಳೆಂದರೆ ಮಾದಯ್ಯ ಉಃ ಹುರುಪಯ್ಯ (ನನ್ನ ತಂದೆ) ಹಾಗೂ ಕೆಂಚಪ್ಪ ಉಃ ಚಿಕ್ಕೇಗೌಡ ಹಾಗೂ ದುಂಡೇಗೌಡ  ಎಂದು ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯರು 3 ನೇ ಮಗ ದುಂಡಯ್ಯ ನ ವಾರಸುದಾರರು ಎಂದರೆ ಸರಿ.

ಮೂಲತಃ ಸರ್ವೆ ನಂ.18 ರಲ್ಲಿ ಕ್ಷೇತ್ರ 2 ಎಕರೆ ಜಮೀನು ಜೋಗಿ ಎಂಬುವವರಿಗೆ ಹಾಗೂ ಅದೇ ಸರ್ವೆ ನಂಬರ್ ನಲ್ಲಿ 2 ಎಕರೆ ಜಮೀನು ಭೈರಾ ಇವರಿಗೆ ಮಂಜೂರಾಗಿತ್ತು ಎಂದರೆ ಸರಿ. ಭೈರಾ ಎನ್ನುವವರು ಬೋರಯ್ಯ ಎನ್ನುವವರಿಗೆ 2 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಜೋಗಿ ಸಹ ಸದರಿ ತನ್ನ 2 ಎಕರೆ ಜಮೀನನ್ನು ಬೋರಯ್ಯನಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಎರಡು ಕ್ರಯಪತ್ರಗಳನ್ನು ಮೂಲ ಸರ್ವೆ ನಂಬರ್ 18 ಎಂದು ನಮೂದಿಸಿ ಕ್ರಯಪತ್ರ ಮಾಡಿರುತ್ತಾರೆ, ಸರ್ವೆ ನಂ.130 ಮತ್ತು 131 ಎಂದು ಕ್ರಯಪತ್ರ ಮಾಡಿರುವುದಿಲ್ಲ ಎಂದರೆ ಸರಿ. ಬೈರಾ ರವರಿಗೆ ಮಂಜೂರಾದ ಜಮೀನು ದುರಸ್ತಿಯಾಗಿ ಸರ್ವೆ ನಂ.18 ಇದ್ದದ್ದು 130 ಎಂದು ಆಗಿರುತ್ತದೆ ಎಂದರೆ ಸರಿ. ಜೋಗಿ ರವರಿಗೆ ಮಂಜೂರಾದ ಜಮೀನು ದುರಸ್ತಿಯಾಗಿ ಸರ್ವೆ ನಂ.18 ಇದ್ದದ್ದು 131 ಎಂದು ಆಗಿರುತ್ತದೆ ಎಂದರೆ ಸರಿ. ಸದರಿ ಎರಡು ಕ್ರಯಪತ್ರ ಆಗುವ ಪೂರ್ವದಲ್ಲಿಯೇ ಎರಡು ಜಮೀನುಗಳು ದುರಸ್ತಿಯಾಗಿ ಹೊಸ ನಂಬರ್ ಬಂದಿದ್ದವು ಎಂದರೆ ಸರಿ. ಬೈರಾ ಇತನ ಮರಣದ ನಂತರ ಆತನ ಹೆಸರಿಗಿದ್ದ ಖಾತೆ ಪೌತಿ ಮೂಲಕ ಆತನ ಹೆಂಡತಿ ಹುಚ್ಚಿ ಕೋಂ ಬೈರಾ ಇವಳ ಹೆಸರಿಗೆ ಕಂದಾಯ ದಾಖಲೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಜೋಗಿ ಇತನ ಮರಣದ ನಂತರ ಆತನ ಹೆಸರಿಗಿದ್ದ ಖಾತೆ ಪೌತಿ ಮೂಲಕ ಆತನ ಹೆಂಡತಿ ಕೆಂಪಿ ಕೋಂ ಜೋಗಿ ಇವಳ ಹೆಸರಿಗೆ ಕಂದಾಯ ದಾಖಲೆಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ.

ದಿ.10.04.1974 ರಂದು ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ನನ್ನ ತಂದೆಯ ಎರಡನೇ ಹೆಂಡತಿಯ ಮಗ ದ್ಯಾವಯ್ಯ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.25.04.1974 ರಂದು ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ನನ್ನ ತಂದೆಯ ಎರಡನೇ ಹೆಂಡತಿಯ ಮಗ

ದ್ಯಾವಯ್ಯ ಇವರು ಪುಟ್ಟಯ್ಯ ಇವರಿಗೆ ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ಭೋಗ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.20.07.1976 ರಂದು ಭೋಗ್ಯಕ್ಕೆ ನೀಡಿದ 20 ಗುಂಟೆ ಜಮೀನನ್ನು ದ್ಯಾವಯ್ಯ ಇವರು ಪುಟ್ಟಯ್ಯನಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ.

ದಿ.23.09.1947 ರಂದು ಸರ್ವೆ ನಂ.18 ರಲ್ಲಿ 2 ಎಕರೆ ಜಮೀನಿನ ಕ್ರಯಪತ್ರದ ಚಕ್ಕುಬಂದಿಯಲ್ಲಿ ಉತ್ತರಕ್ಕೆ ಬೈರಾನಿಂದ ಕ್ರಯಕ್ಕೆ ಪಡೆದ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಬೈರಾ ಇತನ ಜಮೀನು ಇತ್ತು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ತಂದೆಯ ಹೆಸರು ದುಂಡಪ್ಪ ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆಯ ಹೆಸರು ಕೆಂಚಪ್ಪ ಎಂದರೆ ಸರಿ. ದಿ.10.04.1974 ರ ಕ್ರಯಪತ್ರದಲ್ಲಿ ಸರ್ವೆ ನಂ.130 ರ 20 ಗುಂಟೆ ಜಮೀನಿನ ಪೂರ್ವಕ್ಕೆ ಶಿವರಾಜು ಇವರ ಜಮೀನು ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಅದೇ ಕ್ರಯಪತ್ರದ ದಕ್ಷಿಣಕ್ಕೆ ಭಾಗಕ್ಕೆ 1 ನೇ ಪ್ರತಿವಾದಿಯ ತಂದೆ ದುಂಡಯ್ಯ ಇವರ ಜಮೀನು ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ಮುಂದೆ ಇರಬಹುದು ಎಂದು ನುಡಿಯುತ್ತಾರೆ.

ದಿ.25.04.1974 ರ ಭೋಗ್ಯ ಪತ್ರದಲ್ಲಿ ಸರ್ವೆ ನಂ.130 ರ 20 ಗುಂಟೆ ಜಮೀನಿನ ಪೂರ್ವಕ್ಕೆ ನನ್ನ ತಮ್ಮ ಶಿವಣ್ಣ ಇವರ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಪ್ರತಿವಾದಿಯ ತಂದೆ ದುಂಡಯ್ಯ ಇವರ ಜಮೀನು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಭೋಗ್ಯ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಯ ನಡುವಿನ ಸ್ವತ್ತನ್ನು ದಿ.20.07.1976 ರಂದು ಕ್ರಯಕ್ಕೆ ಪಡೆಯಲಾಗಿದೆ ಎಂದರೆ ಸರಿಯಲ್ಲ.

ನಿಪಿ-1 ರ ಕ್ರಯಪತ್ರದಲ್ಲಿ ದಕ್ಷಿಣಕ್ಕೆ 1 ನೇ ಮತ್ತು 2 ನೇ ಪ್ರತಿವಾದಿಯರ ತಂದೆಯಂದಿರಾದ ದುಂಡಪ್ಪ ಮತ್ತು ಕೆಂಚಪ್ಪ ಎಂದು ನಮೂದು ಇದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ದಕ್ಷಿಣಕ್ಕೆ ಸರ್ವೆ ನಂ.131 ಬರುತ್ತದೆ. ಭೋಗ್ಯ ಪತ್ರದಲ್ಲಿ ಸ್ವತ್ತಿನ ಚಕ್ಕುಬಂದಿಯ ದಕ್ಷಿಣಕ್ಕೆ ದುಂಡಪ್ಪ ಮತ್ತು ಕೆಂಚಪ್ಪ ಇವರ ಜಮೀನು ಎಂದು ನಮೂದು ಇದೆ ಎಂದರೆ ಸರಿಯಲ್ಲ. ಭೋಗ್ಯಪತ್ರದಲ್ಲಿ ಸ್ವತ್ತಿನ ಚಕ್ಕುಬಂದಿ ದಕ್ಷಿಣಕ್ಕೆ ಸರ್ವೆ ನಂ.131 ಇರುತ್ತದೆ.

ದಾವಾಸ್ವತ್ತಿನ ಕ್ರಯಕ್ಕೆ ಸಂಬಂದಿಸಿದಂತೆ ಪ್ರತಿವಾದಿಯರು ರಾಮನಗರ ಉಪವಿಭಾಗಧಿಕಾರಿಗಳಲ್ಲಿ ಮೇಲ್ಮನವಿ ಸಲ್ಲಿಸಿದ್ದರೂ ಎಂದರೆ ಸರಿಯಲ್ಲ. ದಿ.24.07.2015 ರಂದು ಉಪವಿಭಾಗಧಿಕಾರಿಗಳು, ರಾಮನಗರ ಇವರು ಮೇಲ್ಮನವಿದಾರರ ಪರ ಆದೇಶ ಮಾಡಿರುತ್ತಾರೆಂದರೆ ಸರಿಯಲ್ಲ. ಎಸಿ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ವಾದಪತ್ರದಲ್ಲಿ ಉಪವಿಭಾಗಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ನಡೆದಿರುವ ವಿಚಾರ ನಮೂದಿಸಿಲ್ಲ.

ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ನನ್ನ ಮುಖ್ಯವಿಚಾರಣ ಪತ್ರದಲ್ಲಿರುವ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವ ವಿಚಾರವನ್ನು ಬರೆಸಿರುವುದು ಸುಳ್ಳಾಗಿರುತ್ತದೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

O.S.No.:122/2016
P.W.:1

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.